# ಶ್ರೀಮಾತೆ ಮತ್ತು ಬಾಬುರಾಮ ಮಹಾರಾಜ್

ಬಂಗಾಳಿ ಮೂಲ: **ಸ್ವಾಮಿ ಸಂಬುದ್ಧಾನಂದ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

೧೯೧೪ರ ಏಪ್ರಿಲ್ ಸುಮಾರಿಗೆ, ಅಥವಾ ವೈಶಾಖ ಮಾಸದ ಆರಂಭದ ಒಂದು ದಿನ ನಾನು ಬೆಳಗಿನ ಹೊತ್ತು, ನನ್ನ ಒಬ್ಬ ಸಹಪಾಠಿ ಗೋಪೀನಾಥ ದಾಸ್‌ನನ್ನು ಜೊತೆಯಲ್ಲಿ ಕರೆದುಕೊಂಡು ಬಾಬುರಾಮ ಮಹಾರಾಜರ (ಸ್ವಾಮಿ ಪ್ರೇಮಾನಂದ) ಭೇಟಿಯಾಗಲು ಹೋಗಿದ್ದೆ. ಬಾಬುರಾಮ ಮಹಾರಾಜರು ಕೆಲವು ದಿನಗಳ ಮುನ್ನ ಢಾಕಾ, ಮೈಮನ್‌ಸಿಂಗ್ ಮೊದಲಾದ ಕಡೆ ಸುತ್ತಾಡಿ ಬಂದಿದ್ದರು; ನಂತರ ಬಾಗ್‌ಬಜಾರಿನಲ್ಲಿರುವ ಬಲರಾಮ ಮಂದಿರದಲ್ಲಿ ತಂಗಿದ್ದರು. ನನಗೆ ಬಹಳ ಮೊದಲಿನಿಂದಲೇ ಬಾಬುರಾಮ ಮಹಾರಾಜರ ಪರಿಚಯವಿತ್ತು. ನಾವಿಬ್ಬರೂ ಹೋಗಿ ಮಹಾರಾಜರಿಗೆ ನಮಸ್ಕರಿಸಿದೆವು. ಬಳಿಕ ನನ್ನ ಸ್ನೇಹಿತನನ್ನು ತೋರಿಸಿ ಹೇಳಿದೆ, ''ಮಹಾರಾಜ್, ನನ್ನ ಈ ಸ್ನೇಹಿತನ ಮನೆ ಮಾಲ್ದಾ[೧]ದಲ್ಲಿದೆ. ಬೇಲೂರು ಮಠದಲ್ಲಿ ಉತ್ಸವಗಳನ್ನು ನೋಡಿ ಅವನ ಮೇಲೆ ಎಷ್ಟೊಂದು ಪ್ರಭಾವವುಂಟಾಗಿದೆ ಎಂದರೆ, ಅವನ ಊರಲ್ಲಿ ಇಂತಹ ಶ್ರೀರಾಮಕೃಷ್ಣರ ಒಂದು ದೊಡ್ಡ ಉತ್ಸವ ನಡೆಸಬೇಕು ಎಂಬ ಆಸೆಯಾಗಿಬಿಟ್ಟಿದೆ. ಅದಕ್ಕೆ ಉತ್ಸವ ನಡೆಯುವಾಗ ತಾವು ಮಾಲ್ದಾಗೆ ಪದಾರ್ಪಣೆ ಮಾಡಬೇಕು ಎಂದು ಅವರೆಲ್ಲರ ಇಚ್ಛೆ.''

ಬಾಬುರಾಮ ಮಹಾರಾಜ್ : ''ಹೌದೆ? ನಿಜವಾಗಿಯೂ ಉತ್ಸವ ಮಾಡುವರೆ? ಯಾವಾಗ?''

ನಾನು : ''ಹೌದು ಮಹಾರಾಜ್. ಜ್ಯೇಷ್ಠ ಮಾಸದಲ್ಲಿ.''

ಬಾಬುರಾಮ ಮಹಾರಾಜ್ : ''ಪೂರ್ವಬಂಗಾಳದಿಂದ (ಈಗಿನ ಬಾಂಗ್ಲಾದೇಶ) ಮರಳಿ ಬಂದ ನಂತರ ನನಗೆ ಆಗಾಗ ಅನ್ನಿಸುತ್ತಿತ್ತು, ರಾಜಶಾಹಿಗಳ (ಉತ್ತರ ಬಂಗಾಳದ ಪ್ರದೇಶ) ಕಡೆಯಿಂದ ನಮ್ಮನ್ನು ಯಾರೂ ಕರೆಯುವುದಿಲ್ಲವೇ ಅಂತ. ಈಗ ನೋಡಿದರೆ, ಹಾಗೆ ಅಂದುಕೊಳ್ಳುವಷ್ಟರಲ್ಲೇ ಮಾಲ್ದಾದಿಂದ ಕರೆ ಬಂದಿದೆ. ಠಾಕೂರರ ಜಯಂತಿ ಆಚರಿಸುತ್ತಿದ್ದಾರೆ, ಅದು ಒಳ್ಳೆಯದೇ. ನೀವು ನೋಡುತ್ತೀರಿ, ಶ್ರೀರಾಮಕೃಷ್ಣರೇ ಕೃಪೆ ತೋರಿ ಎಲ್ಲ ರೀತಿಯಲ್ಲೂ ಅನುಕೂಲ ಮಾಡಿಕೊಡುತ್ತಾರೆ.

ಗೋಪೀನಾಥ – ''ಮಹಾರಾಜ್, ನಾವು ಧೀರೇನ್[೨]ನನ್ನು ಅಲ್ಲಿಗೆ ಕರೆದುಕೊಂಡು ಹೋಗುತ್ತೇವೆ. ಧೀರೇನ್ ಅಲ್ಲಿ ಇದ್ದರೆ ನಮಗೆ ಎಲ್ಲ ಕೆಲಸವೂ ಸುಗಮವಾಗಿ ನಡೆದೀತು.''

ಬಾಬುರಾಮ ಮಹಾರಾಜ್ : ''ಆಗಲಿ, ಕರೆದುಕೊಂಡು ಹೋಗಿ, ಅವನು ಎಲ್ಲವನ್ನೂ ನೋಡಿಕೊಳ್ಳಬಲ್ಲ. (ನನ್ನ ಕಡೆ ತಿರುಗಿ) ಏನಯ್ಯಾ, ಹಾಗಿದ್ದರೆ ಹೋಗುತ್ತೀಯಾ?''

ನಾನು : ''ಇವರೆಲ್ಲರೂ ಬಲವಂತ ಮಾಡುತ್ತಿದ್ದಾರೆ. ಹೋಗಲೇ ಬೇಕು. ನೀವು ಹೋಗು ಎಂದು ಆದೇಶ ನೀಡುತ್ತೀರಾ?''

ಬಾಬುರಾಮ ಮಹಾರಾಜ್ : ''ಅದು ಒಳ್ಳೆಯದು. ಹೋಗಿಬಿಡು; ಎಲ್ಲ ವ್ಯವಸ್ಥೆ ನೋಡಿ, ಮಾಡಿ ಬಾ.''

ನಾನು : ''ಅಲ್ಲಿನವರು ಉತ್ಸವದ ಎಲ್ಲ ವ್ಯವಸ್ಥೆ ಮಾಡಿ, ದಿನಾಂಕ ನಿರ್ಧಾರ ಮಾಡಿಕೊಟ್ಟರೆ, ಸರಿಯಾದ ಸಮಯಕ್ಕೆ ನಾನು ನಿಮಗೆ ತಿಳಿಸುತ್ತೇನೆ. ತಾವು ಅಲ್ಲಿಗೆ ಬಂದುಬಿಡಿ. ನಾವು ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಲು ಬರುತ್ತೇವೆ.''

ಹೀಗೆ ಸ್ವಲ್ಪ ಹೊತ್ತು ನಾವು ಬಾಬುರಾಮ ಮಹಾರಾಜರೊಂದಿಗೆ ಮಾತುಕತೆ ನಡೆಸುತ್ತ ಇದ್ದು, ಬಳಿಕ ಅವರಿಗೆ ಪ್ರಣಾಮ ಮಾಡಿ, ಅವರಿಂದ ಬೀಳ್ಕೊಂಡೆವು.

ಹಳೆಯ ಮಾಲ್ದಾದ ಉತ್ತರ ಭಾಗದಲ್ಲಿರುವ ಕಾಟಾರ್ ಬಜಾರ್ ಎಂಬ ಒಂದು ಒಳ್ಳೆಯ ಬಯಲುಪ್ರದೇಶದಲ್ಲಿ ಉತ್ಸವವನ್ನು ನಡೆಸುವುದೆಂದು ನಿರ್ಧರಿಸಲಾಯಿತು. ನಗರದ ಪ್ರಮುಖರೆಲ್ಲ ಸೇರಿ, ಜ್ಯೇಷ್ಠ ಮಾಸದ ೧೬, ೧೭ ಹಾಗೂ ೧೮ರಂದು ಉತ್ಸವ ನಡೆಸುವುದೆಂದು ತೀರ್ಮಾನವಾಯಿತು. ಮಾಲ್ದಾದ ಎಲ್ಲ ವರ್ಗದ ಜನರಿಗೂ ಉತ್ಸವದ ಆಹ್ವಾನಪತ್ರಿಕೆ ಹೋಯಿತು. ದೂರದ ಪೂರ್ವಬಂಗಾಳದ ಕೆಲವು ವಿಶಿಷ್ಟ ಭಕ್ತರಿಗೂ ಆಹ್ವಾನ ಕಳುಹಿಸಿದ್ದಾಯಿತು.

ಉತ್ಸವದ ದಿನಾಂಕ ನಿಗದಿಯಾದ ಕೆಲವೇ ಸಮಯದ ನಂತರ ನಾನು ಸ್ವಾಮಿ ಪ್ರೇಮಾನಂದ ಮಹಾರಾಜರಿಗೆ ಉತ್ಸವದ ಬಗ್ಗೆ ತಿಳಿಸಿ ಒಂದೆರಡು ಪತ್ರಗಳನ್ನು ಬರೆದೆ. ಸಮಯ ಕಳೆದು ಹೋಗುತ್ತಿದೆ, ಉತ್ತರ ಬಂದಿಲ್ಲ ಎಂದು ತಿಳಿದು ನಾನು ಚಿಂತೆಗೀಡಾದೆ. ಇನ್ನೂ ಒಂದೆರಡು ದಿನಗಳಲ್ಲಿ ಉತ್ತರ ಬಾರದಿದ್ದರೆ, ಟೆಲಿಗ್ರಾಂ ಕಳುಹಿಸಲೇ ಎಂದು ಯೋಚಿಸಿದೆ. ಅಷ್ಟರಲ್ಲೇ ಬಾಬುರಾಮ ಮಹಾರಾಜರ ಉತ್ತರ ಬಂದಿತು. ಪತ್ರದ ಸಾರಾಂಶ ಹೀಗಿದೆ: ''ನಿನ್ನ ಪತ್ರ ಇತ್ಯಾದಿಗಳನ್ನು ಯಥಾಸಮಯದಲ್ಲಿ ಪಡೆದೆ. ಈ ನಡುವೆ ನಾನು ಬಿಡುವಿಲ್ಲದ ಕೆಲಸಗಳಲ್ಲಿ ಮುಳುಗಿದ್ದೆ. ಹಾಗಾಗಿ ಉತ್ತರ ಬರೆಯಲು ತಡವಾಯಿತು. ಇದಕ್ಕೆ ನೀನು ಚಿಂತೆ ಮಾಡುವುದಿಲ್ಲವೆಂದು ಭಾವಿಸುವೆ. ಮಾಲ್ದಾದ

---

೧ ಪಶ್ಚಿಮ ಬಂಗಾಳದ ಉತ್ತರ ಭಾಗದ ಒಂದು ಜಿಲ್ಲೆ ಹಾಗೂ ಪಟ್ಟಣ. *(–ಅನು)*

೨ ಲೇಖಕರ ಪೂರ್ವಾಶ್ರಮದ ಹೆಸರೇ ಧೀರೇನ್ – ಪೂರ್ಣ ಹೆಸರು, ಧೀರೇಂದ್ರ ದಾಸಗುಪ್ತ. *(–ಸಂ)*

ಭಕ್ತರೆಲ್ಲ ಶ್ರೀರಾಮಕೃಷ್ಣರ ಹೆಸರಿನಲ್ಲಿ ಒಂದು ಬೃಹತ್ ಉತ್ಸವವನ್ನು ಮಾಡುತ್ತಿದ್ದಾರೆ ಎಂದು ತಿಳಿದು ನನಗೆ ಅಪಾರ ಆನಂದವುಂಟಾಯಿತು. ಅವರ ಕೃಪೆಯಿಂದ ಅಲ್ಲಿನವರು ನಿರ್ವಿಘ್ನವಾಗಿ ಹಾಗೂ ಅತ್ಯಂತ ಆನಂದದಿಂದ ಉತ್ಸವವನ್ನು ಆಚರಿಸುವಂತಾಗಲಿ. ಈಗ ಸ್ವಾಮಿ ಶಾರದಾನಂದರು ಅತ್ಯಂತ ಅನಾರೋಗ್ಯದಿಂದಿದ್ದಾರೆ. ಈ ಪರಿಸ್ಥಿತಿಯಲ್ಲಿ ನನಗೆ ಅಲ್ಲಿ ಉತ್ಸವದಲ್ಲಿ ಪಾಲ್ಗೊಳ್ಳುವುದು ಸಾಧ್ಯವಿಲ್ಲ. ಇದಕ್ಕಾಗಿ ನೀವೆಲ್ಲರೂ ನಿರುತ್ಸಾಹ ಹೊಂದಬೇಡಿ. ಶ್ರೀರಾಮಕೃಷ್ಣರೇ ನಿಮಗೆ ಎಲ್ಲ ಬಗೆಯ ಸಹಾಯ ಮಾಡುವವರು ಎಂದು ತಿಳಿಯಿರಿ. ಎಲ್ಲರಿಗೂ ನನ್ನ ಅಂತರಂಗದ ಪ್ರೀತಿ, ಆಶೀರ್ವಾದಗಳು.''

ನಾನು ಬಾಬುರಾಮ ಮಹಾರಾಜರ ಪತ್ರವನ್ನು ಓದಿ ನಿರುತ್ಸಾಹಗೊಂಡೆ, ನಿಜ. ಆದರೆ ನಾನು ಪೂರ್ಣವಾಗಿ ನಿರಾಶೆ ಹೊಂದಲಿಲ್ಲ. ಉತ್ಸವದ ವ್ಯವಸ್ಥಾಪಕರು ಈ ಸುದ್ದಿಯನ್ನು ಕೇಳಿ ಸಂಪೂರ್ಣ ನಿರಾಸೆಗೊಂಡರು. ಆಗ ಉತ್ಸವಕ್ಕೆ ಕೇವಲ ೧೧-೧೨ ದಿನ ಮಾತ್ರ ಉಳಿದಿತ್ತು. ಸಮಯ ಕಡಿಮೆ. ಉತ್ಸವದ ದಿನವನ್ನೂ ಬದಲಾಯಿಸಬಹುದೇ – ಈ ಬಗ್ಗೆ ಬೇಲೂರು ಮಠಕ್ಕೆ ಹೋಗಿ, ಬಾಬುರಾಮ ಮಹಾರಾಜರನ್ನು ನೇರವಾಗಿ ಭೇಟಿಯಾದಲ್ಲದೆ ಏನನ್ನೂ ನಿರ್ಧರಿಸಲಾಗದು ಎಂಬಂತಾಗಿತ್ತು. ವ್ಯವಸ್ಥಾಪಕರೊಂದಿಗೆ ವಿಚಾರ ಮಾಡಿ ಹೀಗೆ ನಿರ್ಧರಿಸಲಾಯಿತು. ನಾನು ಇಬ್ಬರು ಯುವಕ ಸ್ವಯಂಸೇವಕರೊಂದಿಗೆ ಜ್ಯೇಷ್ಠ ಮಾಸದ ೯ರಂದು ಬೇಲೂರು ಮಠಕ್ಕೆ ಹೋಗುವುದು; ಬಳಿಕ ಬಾಬುರಾಮ ಮಹಾರಾಜರನ್ನು ಭೇಟಿಯಾಗಿ ಅವರಿಗೆ ಪತ್ರ ನೀಡುವುದು. ಹೀಗೆ ಮಾಡಿದಲ್ಲದೆ ದಿನಾಂಕ ಬದಲಾವಣೆಯ ಕುರಿತು ಯಾವ ಆಲೋಚನೆಯನ್ನೂ ಮಾಡಲಾಗದು.

ನಾನು ಇಬ್ಬರು ಸ್ವಯಂಸೇವಕರೊಂದಿಗೆ ಜ್ಯೇಷ್ಠ ಮಾಸದ ೯ರಂದು ಕಲ್ಕತ್ತೆಗೆ ಹೋದೆ. ಮರುದಿನ ನಾನು ಬೆಳಿಗ್ಗೆ ಶಿಯಲ್ದಾ ತಲುಪಿ, ಮೊದಲಿಗೆ ಆಮ್‌ಹರ್ಸ್ಟ್ ಸ್ಟ್ರೀಟ್‌ನಲ್ಲಿ ಪೂಜ್ಯ 'ಮ'ರವರ ಭೇಟಿಯಾಗಲು ಹೋದೆ, ಅವರಿಂದ ಸ್ವಾಮಿ ಶಾರದಾನಂದರ ದೇಹಾರೋಗ್ಯದ ಬಗ್ಗೆ ತಿಳಿದುಕೊಳ್ಳಬಹುದು ಎಂದು. ಸ್ವಾಮಿ ಶಾರದಾನಂದರ ಆರೋಗ್ಯ ಸುಧಾರಿಸಿದೆ ಎಂದು ಅವರಿಂದ ತಿಳಿದು, ನಿರಾಸೆಗೆ ಒಳಗಾಗಿದ್ದ ನನ್ನ ಹೃದಯದಲ್ಲಿ ಆಸೆ ಚಿಗುರಿತು. ಅಲ್ಲಿಂದ ನಾವು ಬಾಗ್‌ಬಜಾರಿಗೆ ಹೋಗಿ, 'ಉದ್ಬೋಧನ' ಕಾರ್ಯಾಲಯದಲ್ಲಿ ಶ್ರೀಮಾತೆಯವರ ಮನೆಯನ್ನು ತಲುಪಿದೆವು. ಸ್ವಾಮಿ ಶಾರದಾನಂದರು ಅನ್ನಾಹಾರ ಸ್ವೀಕರಿಸಿ ಪಥ್ಯ ಮಾಡುತ್ತಿದ್ದಾರೆ ಎಂದು ತಿಳಿದು ನಾವು ನಿಶ್ಚಿಂತರಾದೆವು. ಬಾಗ್‌ಬಜಾರಿನ ಘಾಟ್‌ನಿಂದ ಒಂದು ದೋಣಿಯನ್ನು ಬಾಡಿಗೆಗೆ ತೆಗೆದುಕೊಂಡು, ಕೂಡಲೇ ನಾವು ಬೇಲೂರು ಮಠಕ್ಕೆ ಹೊರಟೆವು. ಬೇಲೂರು ಮಠದಿಂದ ಘಾಟ್‌ಗೆ ಸಮೀಪ ದೋಣಿ ನಿಂತಿರುವಾಗಲೇ ನೋಡಿದೆ, ಬಾಬುರಾಮ ಮಹಾರಾಜರು ಮಠದ ಕಟ್ಟಡದ ಆಗ್ನೇಯ ಭಾಗದಲ್ಲಿರುವ ಚಾವಣಿ ಕೆಳಗೆ ನಿಂತು, ಸ್ನಾನಕ್ಕೆ ಸನ್ನಾಹ ಮಾಡಿಕೊಳ್ಳುತ್ತಿದ್ದರು. ಅವರನ್ನು ಕಂಡು ನಮ್ಮ ಆನಂದ, ಉತ್ಸಾಹಗಳಿಗೆ ಪಾರವೇ ಇಲ್ಲದಾಯಿತು. ನಾವು, 'ಜೈ ಶ್ರೀ ಗುರುಮಹಾರಾಜ್ ಜೀ ಕೀ ಜೈ', 'ಜೈ ಮಹಾಮಾಯೀ ಕೀ ಜೈ' ಎಂದು ಜೈಕಾರ ಮಾಡತೊಡಗಿದೆವು. ಬಾಬುರಾಮ ಮಹಾರಾಜರು ಜೈಕಾರವನ್ನು ಕೇಳಿ, ದೋಣಿಯ ಕಡೆಗೆ ನೋಡಿದರು. ಅವರು ಒಬ್ಬರು ಬ್ರಹ್ಮಚಾರಿಗೆ, ''ಯಾರೆಲ್ಲ ಬಂದಿದ್ದಾರೆ, ನೋಡು'' ಎಂದರು. ಯಾರೋ ಕೆಲವರು ಘಾಟ್ ಕಡೆಗೆ ಬಂದು ನಮ್ಮನ್ನು ನೋಡಿ, ಸ್ವಾಮಿ ಪ್ರೇಮಾನಂದಜಿಯವರಿಗೆ ನಮ್ಮ ಪರಿಚಯ ಮಾಡಿಕೊಟ್ಟರು. ನಾವು ಮೂವರೂ ದೋಣಿಯಿಂದ ಇಳಿದು, ಗಂಗಾಜಲದಲ್ಲಿ ಕೈಕಾಲು ತೊಳೆದು, ಮೊದಲು ಶ್ರೀರಾಮಕೃಷ್ಣರ ಮಂದಿರಕ್ಕೆ ಪ್ರವೇಶ ಮಾಡಿದೆವು. ಅನಂತರ ಸ್ವಾಮಿ ಪ್ರೇಮಾನಂದರ ಪಾದಧೂಳಿಯನ್ನು ಸ್ವೀಕರಿಸಲು ಅವರ ಬಳಿಗೆ ಹೋದೆವು. ಬಾಬುರಾಮ ಮಹಾರಾಜರು ನಮ್ಮನ್ನು ನೋಡಿ ಹೇಳಿದರು, ''ನೀವು ಬಂದಿರಾ? ನಾನಂದುಕೊಂಡೆ, ನೀವು ನನ್ನನ್ನು ಇನ್ನು ಕರೆಯಲಾರಿರಿ ಅಂತ.'' ಇನ್ನೂ ಒಂದೆರಡು ಮಾತುಗಳನ್ನು ಆಡಿದ ನಂತರ, ಬಾಬುರಾಮ ಮಹಾರಾಜ್ ನಮಗೆ ಸ್ನಾನಾದಿಗಳನ್ನು ಮಾಡಲು ಹೇಳಿದರು.

ಸ್ನಾನ, ಊಟ ಇತ್ಯಾದಿಗಳನ್ನೂ ಮುಗಿಸಿ, ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು, ಸಾಯಂಕಾಲ ನಾನು ಬಾಬುರಾಮ ಮಹಾರಾಜರೊಂದಿಗೆ ಸುತ್ತಾಡುತ್ತಿದ್ದೆ. ಉತ್ಸವಕ್ಕೆ ಹೊರಡುವ ದಿನ ಯಾವುದು ಎಂಬುದನ್ನು ಕೇಳಲು ನಾನು ಅವಕಾಶ ಹುಡುಕುತ್ತಿದ್ದೆ. ಸ್ವಲ್ಪ ಹೊತ್ತಿನ ನಂತರ ಬಾಬುರಾಮ ಮಹಾರಾಜ್, ಸುತ್ತಾಡುತ್ತಿದ್ದವರು ಏನೇನೋ ಬೇರೆ ಬೇರೆ ಕೆಲಸಗಳನ್ನೆಲ್ಲ ನೋಡಿಕೊಂಡು ಬಂದು, ಪೂರ್ವಭಾಗದ ವರಾಂಡದಲ್ಲಿದ್ದ ದೊಡ್ಡ ಒಂದು ಬೆಂಚಿನ ಮೇಲೆ ಕುಳಿತರು. ಆಗ ನಾನು ಇದನ್ನು ಕೇಳಲು ಇದೇ ಸಮಯ ಎಂದು ಭಾವಿಸಿ ಕೇಳಿದೆ, ''ಮಹಾರಾಜ್, ಇಲ್ಲಿಂದ ಯಾವಾಗ ಹೊರಟರೆ ನಿಮಗೆ ಅನುಕೂಲವಾಗುವುದು – ಇದನ್ನು ತಾವು ತಿಳಿಸಿಕೊಟ್ಟರೆ ಒಳ್ಳೆಯದು.''

ಬಾಬುರಾಮ ಮಹಾರಾಜ್ : ''ಈಗತಾನೇ ಬಂದೆ. ಈಗಲೇ ಹೊರಡುವ ಮಾತನಾಡುತ್ತಿರುವೆ? ಇಲ್ಲಿಗೆ ಬಂದಿದ್ದೀಯಲ್ಲ, ಒಂದೆರಡು ದಿನ ವಿಶ್ರಾಂತಿ ಪಡೆದುಕೋ.''

ನಾನು : ''ಒಂದೆರಡು ದಿನ ಸುಮ್ಮನೆ ಕಳೆದುಹೋಗುವುದು. ಅಲ್ಲಿ ಅವರೆಲ್ಲ ಚಿಂತೆಗೊಳಗಾಗಿದ್ದಾರೆ. ನಾವು ಮಾಲ್ದಾಗೆ ಹೊರಡುವ ದಿನವನ್ನು ತಿಳಿಸಿಕೊಟ್ಟರೆ ಅವರಿಗೆ ನಿಶ್ಚಿಂತೆ.''

ಬಾಬುರಾಮ್ ಮಹಾರಾಜ್ : ''ಹೊರಡುವುದು ನನ್ನ ಇಚ್ಛೆಯಂತೆ ನಡೆಯುವುದೆ?''

ನಾನು : ''ಮತ್ತೆ ಇನ್ನು ಯಾರ ಇಚ್ಛೆಯಂತೆ, ಮಹಾರಾಜ್?''

ಬಾಬುರಾಮ ಮಹಾರಾಜ್: ''ಶ್ರೀರಾಮಕೃಷ್ಣರ ಇಚ್ಛೆ ಉಂಟಾದರೆ ಮಾತ್ರ ಹೋಗಬಹುದು. ನಾವು ಏನೇನೋ ಆಗ

ಬೇಕೆಂದು ಬಯಸುತ್ತೇವೆ. ಆದರೆ ಆ ಕೆಲಸಗಳನ್ನೆಲ್ಲ ನಮ್ಮ ಇಚ್ಛೆಯಂತೆ ಮಾಡಬಲ್ಲೆವೆ?''

ನಾನು : ''ಶ್ರೀರಾಮಕೃಷ್ಣರ ಇಚ್ಛೆ ಏನೆಂದು ಹೇಗೆ ಗೊತ್ತಾಗುವುದು, ಮಹಾರಾಜ್?

ಬಾಬುರಾಮ ಮಹಾರಾಜ್ : ''ಯಾಕೆ? ಸಾಕ್ಷಾತ್ ಜಗನ್ಮಾತೆಯೇ ಬಾಗ್‌ಬಜಾರಿನಲ್ಲಿದ್ದಾರೆ! ಅವರನ್ನು ಕೇಳಿದರೆ ಗೊತ್ತಾದೀತು. ಅವರು ಅನುಮತಿ ಕೊಟ್ಟರೆ, ಹೋಗಲು ಸಾಧ್ಯವಾದೀತು.''

ನಾನು : ''ಶ್ರೀಮಾತೆಯವರ ಭೇಟಿಯಾಗಲು ಯಾವಾಗ ಹೋಗುತ್ತೀರಿ?''

ಬಾಬುರಾಮ ಮಹಾರಾಜ್ : ''ನಾಳೆ ಬೆಳಿಗ್ಗೆಯೇ ಹೋಗೋಣ, ನಡೆ. ಬೆಳಿಗ್ಗೆ ಹೊತ್ತು ಇಲ್ಲಿಂದ ಕಲ್ಕತ್ತೆಗೆ ಅನೇಕ ದೋಣಿಗಳು ಹೋಗುತ್ತವೆ. ಒಂದು ದೋಣಿಯನ್ನು ಗೊತ್ತು ಮಾಡಿಕೊಂಡರೆ ಅದು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗುವುದು.''

ನಾನು ಆಸೆ, ನಿರಾಸೆಗಳ ನಡುವೆ ಮುಳುಗೇಳುತ್ತಿದ್ದೆ. ಮನಸ್ಸೆಲ್ಲ ಆತಂಕದಿಂದಿತ್ತು. ಮರುದಿನ ಬೆಳಿಗ್ಗೆ ಎದ್ದು, ಗಂಗಾನದಿಯ ಘಾಟ್‌ನಲ್ಲಿ ನಿಂತುಕೊಂಡೆ. ಒಂದು ದೋಣಿಯನ್ನು ಕರೆದು ಗೊತ್ತುಮಾಡಿಕೊಂಡೆ. ದೋಣಿ, ಘಾಟ್‌ಗೆ ಬಂದಾಗ ಬಾಬುರಾಮ ಮಹಾರಾಜರನ್ನು ಕರೆಯುತ್ತೇನೆ ಎಂದುಕೊಂಡಿದ್ದೆ; ಆದರೆ ಅಷ್ಟರಲ್ಲಿ ಬಾಬುರಾಮ ಮಹಾರಾಜರು ತಾವೇ ದೋಣಿಯ ಬಳಿಗೆ ಹೋಗಿ, ಅದನ್ನು ಹತ್ತಿದರು.

ಸ್ವಲ್ಪ ಸಮಯದಲ್ಲಿಯೇ ದೋಣಿ ಬಾಗ್‌ಬಜಾರ್ ಘಾಟ್ ತಲುಪಿತು. ನಾವು 'ಮಾತೃಮಂದಿರ'ವನ್ನು ತಲುಪಿದೆವು. ಸ್ವಾಮಿ ಶಾರದಾನಂದರು ಕೆಳ ಅಂತಸ್ತಿನಲ್ಲಿದ್ದ ಒಂದು ಕೋಣೆಯಲ್ಲಿ ಕುಳಿತಿದ್ದರು. ಅವರೊಂದಿಗೆ ಬಾಬುರಾಮ ಮಹಾರಾಜರು ಮಾತುಕತೆ ನಡೆಸಲು ಆರಂಭಿಸಿದರು. ಸ್ವಲ್ಪ ಸಮಯದಲ್ಲೇ ಬಾಬುರಾಮ ಮಹಾರಾಜರು ಶ್ರೀಮಾತೆಯವರೊಂದಿಗೆ ಮಾತನಾಡಲು ಹೋಗುವರೆಂದು ತಿಳಿದುಬಂತು. ಅವರು ಮೇಲಂತಸ್ತಿಗೆ ಹೋದರು. ನಾನು ಅವರ ಹಿಂದೆಯೇ ಹೋದೆ. ಬಾಬುರಾಮ ಮಹಾರಾಜರು ಶ್ರೀಮಾತೆಯವರ ಮುಂದೆ ಸಾಷ್ಟಾಂಗ ಪ್ರಣಾಮ ಮಾಡಿದ ಬಳಿಕ, ಮಂಡಿಯೂರಿ ಕೈಜೋಡಿಸಿ ಕುಳಿತರು. ನಾನೂ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ, ಇನ್ನೊಂದು ಪಕ್ಕದಲ್ಲಿ ಕುಳಿತೆ. ಶ್ರೀಮಾತೆಯವರು ಮಂಚದ ಆಗ್ನೇಯ ಭಾಗದಲ್ಲಿ ಎರಡೂ ಕಾಲುಗಳನ್ನು ಚಾಚಿ ಕುಳಿತಿದ್ದರು. ತಲೆಯ ಮೇಲೆ, ಹಣೆಯ ಅರ್ಧಭಾಗದವರೆಗೂ ಸೆರಗು ಮುಚ್ಚಿಕೊಂಡಿತ್ತು. ಮುಖದ ಅರ್ಧಭಾಗವನ್ನು ಅದು ಆವರಿಸಿತ್ತು. ಅವರ ಒಂದು ಪಕ್ಕದಲ್ಲಿ ಒಬ್ಬ ಬ್ರಹ್ಮಚಾರಿ ಕೈಯಲ್ಲಿ ಬೀಸಣಿಗೆ ಹಿಡಿದು ನಿಂತಿದ್ದ.

ಶ್ರೀಮಾತೆ : ''ಬಾಬುರಾಮ, ಹೇಗಿದ್ದೀ ನೀನು?''

ಬಾಬುರಾಮ ಮಹಾರಾಜ್ : ''ಅಮ್ಮಾ, ಈಗ ನಾನು ಚೆನ್ನಾಗಿದ್ದೇನೆ.''

ಶ್ರೀಮಾತೆ : ''ಬೇಲೂರು ಮಠದಲ್ಲಿ ಎಲ್ಲರೂ ಚೆನ್ನಾಗಿದ್ದಾರೆ ತಾನೆ?''

ಬಾಬುರಾಮ ಮಹಾರಾಜ್ : ''ಮಠದಲ್ಲಿ ಎಲ್ಲರೂ ಚೆನ್ನಾಗಿದ್ದಾರಮ್ಮಾ.''

ಶ್ರೀಮಾತೆ : ''ಮತ್ತೇನು ಸಮಾಚಾರ?''

ಬಾಬುರಾಮ ಮಹಾರಾಜ್ : ''ಅಮ್ಮಾ, ನಾನಂತೂ ಮೂರ್ಖ ವ್ಯಕ್ತಿ. ಎಲ್ಲರೂ ನನ್ನನ್ನು ಚೆನ್ನಾಗಿ ಎಳೆದಾಡುತ್ತಾರೆ. (ನನ್ನ ಕಡೆಗೆ ನೋಡಿ) ಇವರೆಲ್ಲ ಮಾಲ್ದಾದಿಂದ ಬಂದಿದ್ದಾರೆ. ಅಲ್ಲಿ ಠಾಕೂರರ ಉತ್ಸವ ನಡೆಯುವುದಂತೆ, ನಾನು ಅಲ್ಲಿಗೆ ಹೋಗಬೇಕು ಅಂತ ಇವರೆಲ್ಲ ಬಯಸುತ್ತಾರೆ.''

ಶ್ರೀಮಾತೆ : ''ಅದು ತುಂಬಾ ದೂರ. ನಿನಗೆ ಇತ್ತೀಚಿಗೆ ಕಾಯಿಲೆ ಉಂಟಾಗಿತ್ತಲ್ಲವೆ?''

ಬಾಬುರಾಮ ಮಹಾರಾಜ್ : ''ಹೌದು. ಹನ್ನೆರಡು– ಹದಿಮೂರು ದಿನಗಳ ಮುನ್ನ ಒಂದು ಸಲ ಜ್ವರ ಬಂದಿತ್ತು.''

ಶ್ರೀಮಾತೆ : ''ಹಾಗಿದ್ದರೆ, ಈ ಸೆಖೆಯ ನಡುವೆ, ನಿನಗೆ ಕಾಯಿಲೆಯೂ ಉಂಟಾಗಿತ್ತು, ಅಷ್ಟು ದೂರ ಹೋಗದಿದ್ದರೆ ಒಳ್ಳೆಯದು.''

ಬಾಬುರಾಮ ಮಹಾರಾಜ್ : ''ಸರಿಯಮ್ಮಾ, ಒಳ್ಳೆಯದು. ಹಾಗೇ ಆಗಲಿ.''

ಬಾಬುರಾಮ ಮಹಾರಾಜರು ಹೀಗೆ ಹೇಳಿದ ನಂತರ, ನಿಧಾನವಾಗಿ ಕೆಳ ಅಂತಸ್ತಿಗೆ ಹೋದರು. ಮಹಾರಾಜರನ್ನು ನೋಡಿದಾಗ ಅನ್ನಿಸಿತು, ಶ್ರೀಮಾತೆಯವರು ಅವರ ಮನದಾಸೆಯಂತೆಯೇ ಆದೇಶ ನೀಡಿದರು ಎಂಬಂತೆ. ಮಹಾರಾಜ್ ಅತ್ಯಂತ ಸಂತಸಗೊಂಡಿದ್ದ ಹಾಗೆಯೂ ಇತ್ತು. ಕೆಳ ಅಂತಸ್ತಿನಲ್ಲಿ ನಾನು ಮತ್ತು ಬಾಬುರಾಮ್ ಮಹಾರಾಜರು ಸ್ವಾಮಿ ಶಾರದಾನಂದರೊಂದಿಗೆ ಬಹಳ ಹೊತ್ತು ಮಾತುಕತೆ ನಡೆಸಿದೆವು.

ಇತ್ತ ನನ್ನ ಮನಸ್ಸಿನಲ್ಲಿ ಏನೇನು ಅವಸ್ಥೆಗಳು ಉಂಟಾದುವು ಎಂದು ಮಾತಿನ ಮೂಲಕ ವರ್ಣಿಸಲಾರೆ. ಸ್ವಲ್ಪ ಹೊತ್ತು ನಾನು ಏನು ಮಾಡಬೇಕೆಂದೇ ತೋಚದೆ ಸುಮ್ಮನಿದ್ದೆ. ಅನಂತರ ಶ್ರೀಮಾತೆಯವರಿಗೆ ಎಲ್ಲವನ್ನೂ ನಿವೇದಿಸಿಕೊಂಡು ಹೇಳಿದೆ: ''ಅಮ್ಮಾ, ಎರಡು–ಎರಡೂವರೆ ತಿಂಗಳಿನಿಂದ ಮಾಲ್ದಾದಲ್ಲಿ ಶ್ರೀ ಠಾಕೂರರ ಉತ್ಸವಕ್ಕಾಗಿ ಸಿದ್ಧತೆ ನಡೆದಿದೆ. ಬಾಬುರಾಮ ಮಹಾರಾಜರನ್ನು ಆಹ್ವಾನಿಸಿ ಈ ಉತ್ಸವವನ್ನು ನಡೆಸಬೇಕು ಎಂಬುದಾಗಿ ಎಲ್ಲರೂ ಅನೇಕ ದಿನಗಳಿಂದ ಸಂಕಲ್ಪ ಮಾಡಿಕೊಂಡಿದ್ದಾರೆ. ಅವರೆಲ್ಲ ಆಸೆಯನ್ನು ಹಿಡಿದಿಟ್ಟುಕೊಂಡಿದ್ದಾರೆ. ಅವರು ಅಲ್ಲಿಗೆ



ಹೋಗದಿದ್ದರೆ ಸಾವಿರಾರು ಜನರಿಗೆ ನಿರಾಸೆಯುಂಟಾಗುವುದು. ವ್ಯವಸ್ಥಾಪಕರಿಗೆಲ್ಲ ತುಂಬಾ ಆಘಾತವುಂಟಾಗುವುದು. ಮಾಲ್ದಾ ಅಷ್ಟೇನೂ ದೂರವಲ್ಲ, ಅಮ್ಮಾ. ಇಂದು ರಾತ್ರಿ ಊಟ ಮಾಡಿ ಹೊರಟರೆ, ನಾಳೆ ಮಧ್ಯಾಹ್ನ ಅಲ್ಲಿಗೆ ತಲುಪಿ, ಊಟ ಇತ್ಯಾದಿಗಳನ್ನು ಮಾಡಬಹುದು. ಮಾರ್ಗದ ನಡುವೆ ಯಾವ ತೊಂದರೆಯೂ ಆಗದು. ಮೊದಲ ದರ್ಜೆ ಅಥವಾ ಎರಡನೇ ದರ್ಜೆ ಗಾಡಿಯಲ್ಲಿ ಒಳ್ಳೆಯ ವ್ಯವಸ್ಥೆ ಮಾಡಿ ಕರೆದುಕೊಂಡು ಹೋಗೋಣ ಅಂತ ತೀರ್ಮಾನ ಮಾಡಿದ್ದೇವೆ. ನೀವು ಅನುಮತಿ ನೀಡದಿದ್ದರೆ ಉತ್ಸವವೆಲ್ಲ ವ್ಯರ್ಥ ವಾಗುವುದು. ಅವರು ಹೆಚ್ಚು ದಿನ ಅಲ್ಲಿ ಉಳಿಯಬೇಕಿಲ್ಲ ; ಕೆಲವು ದಿನಗಳ ಮಟ್ಟಿಗೆ ಬಾಬುರಾಮ ಮಹಾರಾಜರಿಗೆ ಹೋಗಲು ಅನುಮತಿ ನೀಡಿದರೆ ಸಾಕು. ಇಲ್ಲದಿದ್ದರೆ ಎಲ್ಲರಿಗೂ ಹತಾಶೆಯುಂಟಾಗುವುದು. ಎಲ್ಲರೂ ಎಷ್ಟೊಂದು ಆಸೆಯಿಂದ ನಿರೀಕ್ಷೆ ಮಾಡುತ್ತಿದ್ದಾರೆ!''

ಶ್ರೀಮಾತೆ : ''ಅದು ಅಷ್ಟೊಂದು ದೂರವಲ್ಲ ಎನ್ನುತ್ತಿದ್ದೀಯಾ! ಅಷ್ಟೊಂದು ಹತ್ತಿರವೆ?''

ಒಬ್ಬ ಬ್ರಹ್ಮಚಾರಿ : ''ಮಾಲ್ದಾದಿಂದ ದೊಡ್ಡ ದೊಡ್ಡ ಫಜಲಿ ಮಾವಿನ ಹಣ್ಣು ಬರುತ್ತದಮ್ಮಾ.''

ಶ್ರೀಮಾತೆ : ''ಅದಂತೂ ಅಷ್ಟೊಂದು ದೂರವಲ್ಲ, ಹಾಗಾದರೆ.''

ನಾನು : ''ಹೌದಮ್ಮಾ, ಹೆಚ್ಚು ದೂರವೇನೂ ಇಲ್ಲ. ಇವತ್ತು ರಾತ್ರಿ ಹತ್ತು ಗಂಟೆಗೆ ಹೊರಟರೆ ನಾಳೆ ಬೆಳಿಗ್ಗೆ-ಮಧ್ಯಾಹ್ನ ಆಗುತ್ತಿದ್ದಂತೆಯೇ ಅಲ್ಲಿಗೆ ತಲುಪಬಹುದು. ಬಾಬುರಾಮ ಮಹಾರಾಜರಿಗೆ ಯಾವುದೇ ಅನನುಕೂಲವಾಗದಂತೆ ಅವರನ್ನು ಕರೆದುಕೊಂಡು ಹೋಗುತ್ತೇವೆ, ಅಮ್ಮಾ. ದಯವಿಟ್ಟು ಅನುಮತಿ ನೀಡಿ.''

ಶ್ರೀಮಾತೆ : ''ಒಳ್ಳೆಯದು, ಮಗೂ. ನೀವೆಲ್ಲರೂ ಸ್ವಲ್ಪ ಹೋಗಿ. ನಾನು ಸ್ವಲ್ಪ ಹೊತ್ತು ಆಲೋಚನೆ ಮಾಡುತ್ತೇನೆ.''

ಮಂದಿರದಲ್ಲಿ ಶ್ರೀಮಾತೆಯವರು ಒಬ್ಬರೇ ಉಳಿದರು. ನಾನು ಕೆಳ ಅಂತಸ್ತಿಗೆ ಬಂದು ನೋಡಿದೆ, ಬಾಬುರಾಮ ಮಹಾರಾಜರು ಶರತ್ ಮಹಾರಾಜರೊಂದಿಗೆ ಬಹಳ ಮಾತುಕತೆ ನಡೆಸುತ್ತಿದ್ದಾರೆ. ನಾನು ಆಲೋಚಿಸಿದೆ, ಬಾಬುರಾಮ ಮಹಾರಾಜರು ಮಾಲ್ದಾಗೆ ಹೋಗುವ ಸಂಬಂಧವಾಗಿ ಎಂದಿಗೂ ಇಲ್ಲ ಎಂದು ಹೇಳಿಲ್ಲ ; ಅಲ್ಲದೆ, ಶ್ರೀಮಾತೆಯವರು ಬೇಡ ಎಂದಾಗ ಕೂಡ ಅವರು ಯಾವುದೇ ಮಾತನ್ನಾಡಲಿಲ್ಲ. ಅವರು ಶ್ರೀಮಾತೆಯವರ ಆದೇಶವನ್ನು ಕೇಳಿ ಹರ್ಷದಿಂದ ಕೆಳಗಿಳಿದು ಬಂದಿದ್ದರು. ಇನ್ನೊಂದೆಡೆ ನಾನು ಈ ರೀತಿ ಚಿಂತಿಸುತ್ತ ಆಶ್ಚರ್ಯಚಕಿತನಾದೆ : ಸಾಧು ಮಹಾತ್ಮರುಗಳಲ್ಲಿ ವಿರುದ್ಧ ಭಾವನೆಗಳು ಎಷ್ಟೊಂದು ಸಾಮರಸ್ಯದಿಂದಿರುತ್ತವೆ! ನಾನಂದುಕೊಂಡೆ, 'ನೀವು ನನ್ನನ್ನು ಇನ್ನು ಕರೆಯಲಾರಿರಿ' ಎನ್ನುವ ಮಹಾರಾಜರ ಮಾತುಗಳೆಲ್ಲಿ, 'ಹೋಗದಿದ್ದರೆ ಒಳ್ಳೆಯದು' ಎಂಬ ಶ್ರೀಮಾತೆಯವರ ಮಾತುಗಳೆಲ್ಲಿ! ಮತ್ತೆ, ಬಾಬುರಾಮ ಮಹಾರಾಜರ 'ಸರಿಯಮ್ಮಾ, ಒಳ್ಳೆಯದು, ಹಾಗೇ ಆಗಲಿ' ಎಂಬ ಮಾತೆಲ್ಲಿ!

ಸ್ವಲ್ಪ ಹೊತ್ತಿನ ನಂತರ ಮೇಲಿನ ಅಂತಸ್ತಿನಿಂದ ಬ್ರಹ್ಮಚಾರಿಗಳು ಹೇಳಿದರು, ''ಬಾಬುರಾಮ ಮಹಾರಾಜರನ್ನು ಶ್ರೀಮಾತೆಯವರು ಕರೆಯುತ್ತಿದ್ದಾರೆ.'' ಬಾಬುರಾಮ ಮಹಾರಾಜರಿಗೆ ಅದನ್ನೂ ತಿಳಿಸಿದೆ. ಅವರು ಕೂಡಲೇ ಶ್ರೀಮಾತೆಯವರನ್ನು ಭೇಟಿಯಾಗಲು ಹೋದರು. ಅವರ ಹಿಂದೆಯೇ ನಾನು ಹೋದೆ. ಬಾಬುರಾಮ ಮಹಾರಾಜರು ಶ್ರೀಮಾತೆಯವರ ಕೋಣೆಯನ್ನು ಪ್ರವೇಶಿಸಿ ನಿಂತುಕೊಂಡರು.

ಶ್ರೀಮಾತೆ : ''ಬಾಬುರಾಮ್, ಇವರೆಲ್ಲ ಇಷ್ಟೊಂದು ಒತ್ತಾಯಿಸಿ ಕೇಳುತ್ತಿದ್ದಾರೆ, ಹಾಗಿದ್ದರೆ ನೀನು ಹೋಗಿ ಬರುತ್ತೀಯಾ?''

ಬಾಬುರಾಮ ಮಹಾರಾಜ್ : ''ಅಮ್ಮಾ, ನನಗೇನು ಗೊತ್ತಿದೆ? ನನಗೇನು ಗೊತ್ತು? ನನಗೆ ನೀವು ಏನು ಆದೇಶ ನೀಡುತ್ತೀರೋ ಹಾಗೇ ಮಾಡುತ್ತೇನೆ. ನೀರಿಗೆ ಹಾರು ಅಂದರೆ, ಹಾರುತ್ತೇನೆ. ಬೆಂಕಿಗೆ ಹಾರು ಎಂದರೆ, ಬೆಂಕಿಗೆ ಹಾರುತ್ತೇನೆ. ಪಾತಾಳವನ್ನು ಪ್ರವೇಶಿಸು ಎಂದರೆ, ಪಾತಾಳ ಪ್ರವೇಶ ಮಾಡುತ್ತೇನೆ. ನನಗೇನು ಗೊತ್ತಮ್ಮಾ?''

ಬಾಬುರಾಮ ಮಹಾರಾಜರು ಈ ಮಾತುಗಳನ್ನು ಎಂಥ ಭಾವಾವೇಗದಿಂದ ಹೇಳಿದರೆಂದರೆ, ಸ್ವಲ್ಪ ಹೊತ್ತಿನವರೆಗೆ ಎಲ್ಲವೂ ಮೌನ, ಸ್ತಬ್ಧವಾಗಿತ್ತು. ಬಾಬುರಾಮ ಮಹಾರಾಜರ ಕಣ್ಣು, ಬಾಯಿ ಎಲ್ಲವೂ ಕೆಂಪಗಾಗಿತ್ತು. ಎಲ್ಲರೂ ಸ್ವಲ್ಪ ಹೊತ್ತು ಅದ್ಭುತವೆಂಬಂತೆ ಮುಗ್ಧರಾಗಿ ನಿಂತುಬಿಟ್ಟರು. ಶ್ರೀಮಾತೆಯವರೂ ಸ್ವಲ್ಪ ಹೊತ್ತು ಮೌನದಿಂದಿದ್ದರು. ಅದೊಂದು ಅದ್ಭುತ ದೃಶ್ಯ — ಅದನ್ನು ಮಾತಿನ ಮೂಲಕ ವರ್ಣಿಸಲಾಗದು. ಸ್ವಲ್ಪ ಹೊತ್ತಿನ ನಂತರ ಶ್ರೀಮಾತೆಯವರ ಅಮೃತಮಯವಾದ ವಾಣಿಯಿಂದ ಆ ನಿಶ್ಶಬ್ದತೆಗೆ ಭಂಗವುಂಟಾಯಿತು.

ಶ್ರೀಮಾತೆ : ''ಇವರೆಲ್ಲರೂ ಶ್ರೀರಾಮಕೃಷ್ಣರ ಉತ್ಸವವನ್ನು ಆಚರಿಸುತ್ತಿದ್ದಾರೆ. ಅವರು ಇಷ್ಟೊಂದು ಕಾತರರಾಗಿ ಬೇಡು

ತ್ತಿದ್ದಾರೆ. ಹೋಗಿ ಬಾ, ಒಂದು ಸಲ ಹೋಗಿ ಬಾ. ಆದರೆ ಹೆಚ್ಚು ದಿನ ಅಲ್ಲಿ ತಂಗಬೇಡ.''

ಬಾಬುರಾಮ ಮಹಾರಾಜರು ಸ್ವಲ್ಪ ಹೊತ್ತಿನ ನಂತರ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ, ಕೆಳಗಿಳಿದು ಬಂದರು. ಆಗ ಬ್ರಹ್ಮಚಾರಿಗಳು ನನ್ನನ್ನು ಕರೆದು ಹೇಳಿದರು, ''ಇಗೋ, ನಿನ್ನನ್ನು ಶ್ರೀಮಾತೆಯವರು ಕರೆಯುತ್ತಿದ್ದಾರೆ. ಅವರ ಹತ್ತಿರ ಮಾತನಾಡು, ಹೋಗು.'' ನಾನು ಶ್ರೀಮಾತೆಯವರ ಕೋಣೆಯನ್ನು ಪ್ರವೇಶಿಸಿ, ನಿಂತುಕೊಂಡೆ. ಶ್ರೀಮಾತೆ ನನಗೆ ಹೇಳಿದರು, ''ನೋಡು, ಇವರೆಲ್ಲ ಮಹಾಪುರುಷರು. ಇವರ ದೇಹವಿರುವುದು ಜಗತ್ತಿನ ಕಲ್ಯಾಣಕ್ಕಾಗಿ. ನೋಡು, ಅವರ ದೇಹಕ್ಕೆ ಯಾವುದೇ ಹಾನಿ ಉಂಟಾಗದಿರಲಿ.'' ನಾನಂದೆ, ''ಅಮ್ಮಾ, ಇಲ್ಲಿಂದ ನಾವು ಬಾಬುರಾಮ ಮಹಾರಾಜರನ್ನು ಪ್ರಥಮ ಅಥವಾ ದ್ವಿತೀಯ ದರ್ಜೆಯ ಬರ್ತ್ ಅನ್ನು ರಿಸರ್ವ್ ಮಾಡಿ ಕರೆದುಕೊಂಡು ಹೋಗುತ್ತೇವೆ. ಅದರೊಂದಿಗೆ ನಾನಾ ಬಗೆಯ ಆಹಾರ ಪದಾರ್ಥಗಳು ಇರುತ್ತವೆ. ಅಲ್ಲಿ ಕೂಡ ಸಾಕಷ್ಟು ಸಿದ್ಧತೆಗಳನ್ನು ಮಾಡಿರುತ್ತಾರೆ. ಮಹಾರಾಜರಿಗೆ ಯಾವುದೇ ತೊಂದರೆಯಾಗದಂತೆ ನಾವು ಪ್ರಾಣವನ್ನೇ ಪಣವಾಗಿಟ್ಟು ಪ್ರಯತ್ನ ಮಾಡುತ್ತೇವೆ. ಅಮ್ಮಾ, ನೀವು ಏನೂ ಚಿಂತೆ ಮಾಡಬೇಡಿ. ನಾನು ಈ ವಿಷಯದಲ್ಲಿ ವಿಶೇಷ ಕಾಳಜಿ ವಹಿಸುತ್ತೇನೆ.''

ಶ್ರೀಮಾತೆಯವರು ಆಶೀರ್ವಾದ ಮಾಡುತ್ತಾ, ''ಆಗಲಿ, ಮಗೂ. ಹೋಗಿ ಬಾ'' ಎಂದರು.

ಶ್ರೀಮಾತೆಯವರಿಗೆ ನಾನು ಪ್ರಣಾಮ ಮಾಡಿ, ಕೆಳಗಿಳಿದು ಬಂದೆ. ಬಾಬುರಾಮ ಮಹಾರಾಜರು ಢಾಕಾ ಇಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕ ಹಾಗೂ ವಿಶೇಷ ಭಕ್ತ ಹಾಗೂ ಸ್ವಯಂ ಸೇವಕರಾಗಿದ್ದ ಪ್ರಫುಲ್ಲ ಬಂದೋಪಾಧ್ಯಾಯರೊಂದಿಗೆ ಮಾತನಾಡುತ್ತಿದ್ದರು; ಅವರನ್ನು ಕೇಳಿದರು, ''ಪ್ರಫುಲ್ಲ, ನೀನು ಮಾಲ್ದಾಗೆ ಹೋಗುತ್ತೀಯಾ? ಅಲ್ಲಿ ನೀನು ಅನೇಕ ಮಂದಿ ಹೊಸ ಭಕ್ತರುಗಳನ್ನು ನೋಡುತ್ತೀಯೆ. ನಿನಗೆ ತುಂಬಾ ಆನಂದವುಂಟಾಗುವುದು.'' ಅವರ ಒತ್ತಾಯದ ಮೇರೆಗೆ ಪ್ರಫುಲ್ಲಬಾಬು ಅಲ್ಲಿಗೆ ಹೋಗಲು ಒಪ್ಪಿಕೊಂಡರು. ಬಾಬುರಾಮ ಮಹಾರಾಜರು ಅನಂತರ ನನಗೆ ಹೇಳಿದರು, ''ನಡೆ, ಗಂಗಾಧರ ಮಹಾರಾಜರು[೩] ಬಲರಾಮ ಮಂದಿರದಲ್ಲಿದ್ದಾರೆ. ಅವರನ್ನು ನೋಡಿ ಬರುತ್ತೇನೆ.'' ಅವರು ನನ್ನನ್ನು ಜೊತೆಗೆ ಕರೆದುಕೊಂಡು ಬಲರಾಮ ಮಂದಿರಕ್ಕೆ ಹೋದರು. ಗಂಗಾಧರ ಮಹಾರಾಜರು ತಂಗಿದ್ದ ಕೋಣೆಗೆ ಹೋಗಿ, ಬಾಬುರಾಮ ಮಹಾರಾಜರು ಅವರನ್ನು, ''ಹೇಗಿದ್ದೀಯಾ?'' ಎಂದು ಕೇಳಿದರು.

ಗಂಗಾಧರ ಮಹಾರಾಜ್ : ''ಇನ್ನು ಹೇಗಿರುತ್ತೇನೆ, ಅಣ್ಣಾ. ಔಷಧಿ, ಪಥ್ಯ ಮಾಡುತ್ತಿದ್ದೇನೆ. ಹೀಗೇ ದಿನಗಳನ್ನು ಸಾಗಹಾಕುತ್ತಿದ್ದೇನೆ.''

ಬಾಬುರಾಮ ಮಹಾರಾಜ್: ''ನೀನು ಇಲ್ಲಿಗೆ ಬಂದು ಇಷ್ಟು ದಿನಗಳಾದವು. ಬೇಲೂರು ಮಠಕ್ಕೆ ಒಂದು ಸಲವೂ ಬರಲಿಲ್ಲ ಏಕೆ? ಸ್ವಾಮೀಜಿ ಮಠವನ್ನು ಸ್ಥಾಪಿಸಿ ಹೊರಟುಹೋದರು. ನೀನು ಕಲ್ಕತ್ತೆಗೆ ಬಂದೂ ಬೇಲೂರು ಮಠಕ್ಕೆ ಬರಲಿಲ್ಲವಲ್ಲ?''

ಗಂಗಾಧರ ಮಹಾರಾಜ್ : ''ಶ್ರೀಮಾತೆ ಬಲವಂತ ಮಾಡಿ ನನ್ನನ್ನು ಸಾರಗಾಛಿಯಿಂದ ಚಿಕಿತ್ಸೆಗೋಸ್ಕರ ಇಲ್ಲಿಗೆ ಕರೆದುಕೊಂಡು ಬಂದರು. ವೈದ್ಯರನ್ನು ಗೊತ್ತುಮಾಡಿದರು. ಇಲ್ಲಿ ನಿಯಮ ಪ್ರಕಾರ ಔಷಧಿ ತೆಗೆದುಕೊಳ್ಳುತ್ತಿದ್ದೇನೆ, ಪಥ್ಯ ಮಾಡುತ್ತಿದ್ದೇನೆ. ಈಗ ನಾನು ಎಲ್ಲಿಗ್ಗಾದರೂ ಹೋದರೆ, ಶ್ರೀಮಾತೆ ಬಯ್ಯುತ್ತಾರೆ. ಇನ್ನು ನೀವಂತೂ ಬೈರಾಗಿಗಳು, ಅಲ್ಲಿ ನೀವು ಮೀನಿನ ಸಾರಿನ ಪಥ್ಯ ನೀಡುತ್ತೀರಾ?'' (ನಗು)

ಬಾಬುರಾಮ ಮಹಾರಾಜ್: ''ಸರಿ, ಹೊರಡು. ನಿನಗೆ ಪಥ್ಯ ನೀಡಬಲ್ಲೆನೋ ಇಲ್ಲವೋ ಅಂತ ನೀನೇ ನೋಡುವೆಯಂತೆ.''

ಗಂಗಾಧರ ಮಹಾರಾಜ್ : ''ಈಗ ನಾನು ಎಲ್ಲಿಗ್ಗಾದರೂ ಹೋದರೆ, ಶ್ರೀಮಾತೆ ಬಯ್ಯುವರು. ನನ್ನ ದೇಹಾರೋಗ್ಯ ಉತ್ತಮವಾಗಲು ಬಿಡು.''

ಏನೇ ಮಾಡಿದರೂ ಬಾಬುರಾಮ ಮಹಾರಾಜರು ಬಿಡಲಿಲ್ಲ. ಗಾಡಿ ತರಿಸಲು ಜನರನ್ನು ಕಳುಹಿಸಿದರು. ನಾವೆಲ್ಲರೂ ಗಾಡಿಯಲ್ಲಿ ಗಂಗಾಧರ ಮಹಾರಾಜರೊಂದಿಗೆ ಹೊರಟೆವು. ಬಳಿಕ ಬಾರಾನಗರ ಘಾಟ್‌ನಿಂದ ದೋಣಿಯ ಮೂಲಕ ಬೇಲೂರು ಮಠವನ್ನು ತಲುಪಿದೆವು. ಬಾಬುರಾಮ ಮಹಾರಾಜರೊಂದಿಗೆ ಮಾಲ್ದಾ ಉತ್ಸವಕ್ಕೆ ಯಾರು ಯಾರು ಹೋಗುತ್ತಾರೆ ಎಂಬ ವಿಷಯವಾಗಿ ಚರ್ಚಿಸಲಾಯಿತು. ಸ್ವಾಮಿ ಧೀರಾನಂದ, ಬ್ರಹ್ಮಚಾರಿ ಚಾರುಚಂದ್ರ, ಎಂಟಲಿಯ ಕೇಷ್ಟಬಾಬು, ದುರ್ಗಾನಾಥ ಬಾಬು ಹಾಗೂ ಇನ್ನಿತರ ಭಕ್ತರೊಂದಿಗೆ ಅವರು ಹೊರಡುವುದಾಗಿ ತೀರ್ಮಾನವಾಯಿತು. ಹೊರಡುವ ದಿನಾಂಕದ ಬಗ್ಗೆ ಕೇಳಿದಾಗ ಬಾಬುರಾಮ ಮಹಾರಾಜರು ಹೇಳಿದರು, ''ಯಾಕೆ — ಇಂದೇ (ಗುರುವಾರ) ಹೊರಡಬಹುದಲ್ಲ?'' ನಾನಂದೆ, ''ಇಂದು ಹೋಗುವುದಾಗಿದ್ದರೆ, ಗುರುವಾರ –ಅಶುಭ ದಿನದಂದು ಮಠದಿಂದ ಹೊರಡಬೇಕಾಗುವುದು.''

ಬಾಬುರಾಮ ಮಹಾರಾಜ್ : ''ಶ್ರೀಮಾತೆ ಅನುಮತಿ ನೀಡಿದ್ದಾರೆ. ಇನ್ನು ಗುರುವಾರ ಅಶುಭದಿನ ಹೇಗಾಗುವುದು?''

ಬಾಬುರಾಮ ಮಹಾರಾಜರು ಹಾಗೂ ಉಳಿದ ಸಾಧುಗಳು ಸಂಜೆ ಬಲರಾಮ ಮಂದಿರಕ್ಕೆ ಹೋಗುವರು; ಅಲ್ಲಿ ರಾತ್ರಿ ಊಟ ಮಾಡಿ, ಶಿಯಲ್ದಾಗೆ ಹೋಗಿ ಟ್ರೇನ್ ಹಿಡಿಯುವರು ಎಂಬುದಾಗಿ ನಿರ್ಧಾರವಾಯಿತು.

[೩] ಸ್ವಾಮಿ ಅಖಂಡಾನಂದರು. *(–ಅನು)*